ದೇವಸ್ಥಾನ ಕಟ್ಟಲು ೯೫,೦೦೦ ರೂಪಾಯಿಗಳ ಮಂಜೂರಾತಿ ಕುರಿತು

೯೯೫. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನ ಗಿರಿಯಾಪುರ ಗ್ರಾಮಸ್ಥರು ದೇವಾಲಯವನ್ನು ಕಟ್ಟಲು ಮನವಿ ಸಲ್ಲಿಸಿದ್ದಾರೆಯೆ ?

ಆ) ಸುಮಾರು ೯೫,೦೦೦ ರೂಪಾಯಿಗಳ ಅಂದಾಜಿನಲ್ಲಿ ಅರ್ಧ ಭಾಗ ಹಣವನ್ನು ಸರ್ಕಾರದವರು ನೀಡುವರೇ ?

ಶ್ರೀ ಕೆ. ಅಮರನಾಥ್ ಶೆಟ್ಟಿ (ಮುಜರಾಯಿ ಮಂತ್ರಿಗಳು).—

ಅ) ಸಲ್ಲಿಸಿದ್ದಾರೆ.

ಆ) ಪರಿಶೀಲಿಸಲಾಗುವುದು.

ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಪಾರ್ಥ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಖಾತೆಯ ಸಚಿವರ ಪರವಾಗಿ :

೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೭೦ನೇ ಕಲಮಿನ ಮೇರೆಗೆ :—

ಅ) ಶ್ರೀ ಎಸ್ ಕೆ. ಜಯರಾಮೇಗೌಡ, ಮಾಲೀಕರು, ವಂಜುನಾಥ ಸಂಚಾರಿ ಚಿತ್ರ ಮಂದಿರ ಸಾಲಿಗ್ರಾಮ, ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ ಇವರು ಅರ್ಜಿ ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಾ ಮಾಡಿ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೧೧ನೇ ಫೆಬ್ರವರಿ ೧೯೮೮ರಂದು ಹೊರಡಿಸಲಾದ ಸಂಖ್ಯೆ. ಹೆಚ್.ಡಿ. ೨೧೯ ಸಿ.ಎನ್.ಎ. ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಆ) ವಿಜಯರಂಗ ಮಕ್ಕಳ ಚಲನಚಿತ್ರ ಮಂದಿರ, ಜವಾಹರಲಾಲ್ ಬಾಲಭವನ ಕಬ್ಬನ್‌ಪಾರ್ಕ್ ಇಲ್ಲಿ ಚಲನಚಿತ್ರಗಳನ್ನು ಉಚಿತವಾಗಿ ಪ್ರದರ್ಶಿಸುವ ಬಗ್ಗೆ ದಿನಾಂಕ ೩೦ನೇ ಜನವರಿ ೧೯೮೮ರಂದು ಹೊರಡಿಸಲಾದ ಹೆಚ್.ಡಿ. ೨೪೦ ಸಿ.ಎನ್.ಎ. ೮೭ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು —ಕಾಗದ ಪತ್ರಗಳನ್ನು ಮಂಡಿಸಲಾಯಿತು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಬೆಂಗಳೂರು ನಗರದಲ್ಲಿ ಆಟೋರಿಕ್ಷಾಗಳ ಚಾಲನೆ ನಿಂತಿರುವ ಬಗ್ಗೆ

† ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಸಭಾಧ್ಯಕ್ಷರೇ, ಇವತ್ತು ಪತ್ರಿಕೆಗಳಲ್ಲಿ ಬಂದಿರುವುದನ್ನು ತಾವು ಕೂಡ ನೋಡಿರಬಹುದು ಕಳೆದ ಎರಡು ದಿವಸಗಳಿಂದ ಬೆಂಗಳೂರು ನಗರದಲ್ಲಿ ಆಟೋರಿಕ್ಷಾಗಳ ಓಡಾಟ ಬಂದ್ ಆಗಿದೆ. ಕೆಲವು ಆಟೋರಿಕ್ಷಾಗಳನ್ನವರು ಪೆಟ್ರೋಲ್ ಜೊತೆಯಲ್ಲಿ ಸೀಮೆ ಎಣ್ಣೆಯನ್ನು ಸೇರಿಸಿ ಆಟೋಗಳನ್ನು ಓಡಿಸುತ್ತಿರುವುದರಿಂದ ವಾತಾವರಣ ಕಲುಷಿತವಾಗುತ್ತದೆಂದು ಪೋಲೀಸಿನವರು ಸುಮಾರು ೧೦೦-೨೦೦ ಜನ ಆಟೋ ಡ್ರೈವರುಗಳನ್ನು ಅರೆಸ್ಟ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.